ನಡುವಿನ ಬಹುಸೂಕ್ಷ್ಮವಾದ ಬಂಧನದ ಎಳೆಗಳು ಮತ್ತು ಅದನ್ನು ಹೇರುವ ಕುಟುಂಬ–ಸಮಾಜ ವ್ಯವಸ್ಥೆ ಮತ್ತು ಅವುಗಳನ್ನು ದಿಟ್ಟವಾಗಿ ಎದುರಿಸಲಾಗದ ಪೊಳ್ಳುತನಗಳೆಲ್ಲವೂ ಸೇರಿ ಬಹುಸಂಕೀರ್ಣವಾದ ಅನುಭವಪ್ರಪಂಚವನ್ನು ಈ ಕಥೆ ನಮ್ಮೆದುರಿಡುತ್ತದೆ.

ಸಂಪತ್ ಅವರ ಹಲವು ಕಥೆಗಳ ನಾಯಕ ಅಥವಾ ನಿರೂಪಕ ಧೀಮಂತನಲ್ಲ; ಸಂಸಾರವನ್ನು, ಸಂಬಂಧಗಳನ್ನು, ಅದರಲ್ಲಿ ಬರುವ ಸಂಕಟ–ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ನಿಲ್ಲುವವನಲ್ಲ. ಎಲ್ಲ ಸುಖಗಳನ್ನೂ ಬಾಚಿಕೊಳ್ಳುವ, ಅದರ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪಲಾಯನವಾದಿ. ಅವನು 'ರಿಸ್ಕ್' ತೆಗೆದುಕೊಂಡು ಏನನ್ನೂ ಮಾಡಲಾರ. ಜವಾಬ್ದಾರಿ ಹೊರಬೇಕಾದ ಸಂದರ್ಭ, ಸಂಬಂಧಗಳಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತಿರುತ್ತಾನೆ. ತನ್ನ ಸುತ್ತಲಿನ ಜಗತ್ತನ್ನೂ ಮನುಷ್ಯ ಸಂಬಂಧಗಳನ್ನೂ ಅವನು ಉಡಾಫೆಯಿಂದಲೇ ನೋಡುತ್ತಿರುತ್ತಾನೆ. ಆ ಉಡಾಪೆಯನ್ನು ಸಮರ್ಥಿಸಿಕೊಳ್ಳುವ ಹಾಗೆ ಅವನ 'ದೃಷ್ಟಿಕೋನ'ದಲ್ಲಿಯೇ ಹರಿತವಾದ ವ್ಯಂಗ್ಯವಿದೆ. ಆ ವ್ಯಂಗ್ಯದ ನೋಟಕ್ಕೆ ಒಂದನ್ನು ಕಾಣಿಸಿ ಇನ್ನೊಂದನ್ನು ಧ್ವನಿಸುವ ಶಕ್ತಿ ಇದೆ. ಆ ಧ್ವನಿಶಕ್ತಿಯೇ ಸಂಪತ್ ಅವರ ಹಲವು ಕಥೆಗಳು ಹೊಸ ಬೆಳಕಲ್ಲಿ ಹೊಳೆಯುವ ಹಾಗೆ ಮಾಡಿವೆ. ಆದರೆ, 'ರಂಪ' ಎನ್ನುವ ಕಥೆಯಲ್ಲಿ ಈ ವ್ಯಂಗ್ಯವೇ ಕಥೆಯ ಮಿತಿಯೂ ಆಗಿದೆ. ಪ್ರಹಸನದ ಧಾಟಿಯಲ್ಲಿಯೇ ನಿರೂಪಿತಗೊಂಡಿರುವ ಈ ಕಥೆಯಲ್ಲಿ ಸಂಪತ್ ಅವರ ಚಿತ್ರಕಶಕ್ತಿ ಸಾಕಷ್ಟು ಶಕ್ತವಾಗಿ ವ್ಯಕ್ತವಾಗಿದೆ. ತನ್ನ ಬದುಕಿನ ಭಾಗದಲ್ಲಿಯೇ ನಡೆಯುತ್ತಿರುವ ಕಥೆಯನ್ನು ದೂರದಲ್ಲಿ ನಿಂತು 'ಮಜಾ ನೋಡುವ' ಪ್ರೇಕ್ಷಕನ ಹಾಗೆ ಒರೆಯುತ್ತ ಹೋಗುವ ನಿರೂಪಕನ 'ಪೊಸಿಷನ್' ಈ ಕಥೆಗೆ ವಿಶಿಷ್ಟ ಆಯಾಮವನ್ನು ನೀಡಿದೆ. ಆದರೆ, ಹೇಗಾದರೂ ಕಥೆಯನ್ನು ಶುಭಾಂತ್ಯಗೊಳಿಸಿ ನಿರಾಳಗೊಳ್ಳುವ ಧಾವಂತ ಕಥೆಯನ್ನು ದುರ್ಬಲಗೊಳಿಸಿದಂತಿದೆ. ಹೀಗಾಗಿಯೇ ಮನುಷ್ಯನ ಮನಸ್ಸಿನೊಳಗಿನ ಕ್ರೌರ್ಯವನ್ನು ಸಶಕ್ತವಾಗಿ ಧ್ವನಿಸಬಹುದಾಗಿದ್ದ ಸಾಧ್ಯತೆಗಳನ್ನೆಲ್ಲ ಬಿಟ್ಟುಕೊಟ್ಟು, ಮಜಾ ಕೊಡುವ ಘಟನೆಗಳ ಸುಲಲಿತ ನಿರೂಪಣೆಗೇ ಕಥೆ ಮುಗಿದುಹೋಗಿದೆ.

'ದಡಮುಟ್ಟಿಸುವ ಧಾವಂತ', ಮುಗಿದ ಕಥೆಯನ್ನು ಇನ್ನಷ್ಟು ಎಳೆದುಕೊಂಡು ಹೋಗಿ ದುರ್ಬಲಗೊಳಿಸಿರುವುದೂ ಇದೆ. 'ಕಣ್ಮರೆ' ಅಂಥದ್ದೊಂದು ಕಥೆ. ಇದು ಸಂಪತ್ ಅವರ ಅತ್ಯುತ್ತಮ ಕಥೆಯಾಗುವ ಎಲ್ಲ ಸಾಧ್ಯತೆಯನ್ನು ಒಳಗೊಂಡಿತ್ತು.

ಮನೆಯೆದುರು ವರ್ಷಾನುಗಟ್ಟಲೆಯಿಂದ ಇದ್ದ ಗುಂಡಿಗಳ ರಸ್ತೆ ಇದ್ದಕ್ಕಿದ್ದಂತೆ ಟಾರು ಹೊದ್ದು ಮಿಂಚಿದಾಗಲೂ ವಿಚಲಿತನಾಗುವಷ್ಟು ಏಕತಾನತೆಯ ವ್ಯಸನಿ ಈ ಕಥೆಯ ನಾಯಕ. ಪ್ರತಿದಿನ ಆಫೀಸಿಗೆ ಹೋಗುವಾಗ ಕ್ಯಾಬ್ ಹತ್ತುತ್ತಿದ್ದ ಜಾಗದಲ್ಲಿ, ತನ್ನನ್ನು ನೋಡಿ ನಗು ಬೀರುತ್ತಿದ್ದ ಗುಂಗುರು ಕೂದಲಿನ ಕಪ್ಪು ಯುವಕ ಕಾಣಿಸದಾದಾಗ ತನ್ನ ದಿನಚರಿಯೇ ಬುಡಮೇಲಾದಂತೆ ಒದ್ದಾಡುತ್ತಾನೆ. ಮತ್ತಷ್ಟು ದಿನಕಳೆದರೂ ಆ ಹುಡುಗ ಕಾಣದಾದಾಗ ತನ್ನ ಆಫೀಸು ಕೆಲಸವನ್ನೂ ಮಾಡಲಾಗದೆ ಕಂಗೆಡುತ್ತಾನೆ. ಅವನನ್ನು ಹುಡುಕಿಕೊಂಡು ಹೊರಟವನಿಗೆ ಹೊಸದೇ ಜಗತ್ತು ತೆರೆದುಕೊಳ್ಳುತ್ತಾ ಹೋಗುತ್ತದೆ. ತಿಂಗಳಿಗೆ ಐದಾರು ಮೀಟಿಂಗು, ಆರು ತಿಂಗಳಿಗೊಮ್ಮೆ ಔಟಿಂಗು, ವರ್ಷಕ್ಕೊಮ್ಮೆ ತನ್ನ ಕೆಳಗಿರುವವರ ಅಪ್ರೈಸಲ್ಲು – ಹೀಗೆ ಪೂರ್ವನಿಯೋಜಿತ ಜಗತ್ತಿನಲ್ಲಿಯೇ ಬದುಕಿದ್ದವನಿಗೆ, ಮರುದಿನ ಏನಾಗುತ್ತದೆ ಎಂಬುದೇ ತಿಳಿಯದ ಅನಿಶ್ಚಿತತೆಯಲ್ಲಿ ಬದುಕುವವರ, ತನ್ನದೇ ಸಮಾಜದ ಇನ್ನೊಂದು ಮುಖ ಪರಿಚಯವಾಗುತ್ತದೆ. ತಾನು ಎಲ್ಲಿಗೆ ಹೋಗಿ ತಲುಪಬಹುದು? ಹೋಗಿ ತಲುಪಿದ ನಂತರ ಏನು ಮಾಡಬಹುದು ಎಂಬುದರ ಅರಿವೂ ಇಲ್ಲದೆ ದಾರಿಯಲ್ಲಿ ಸಿಗುವ ಸಣ್ಣ ಸಣ್ಣ ಸುಳಿವುಗಳ ಬೆನ್ನತ್ತಿ ಹೊರಡುವ ಅವನಿಗೆ ಮೆಟ್ರೊ ಕಾಮಗಾರಿ ಸ್ಥಳದಲ್ಲಿ ಆಳವಾದ ಹೊಂಡ ಎದುರಾಗುತ್ತದೆ. ತಳ ಕಾಣದ ಆ ಹೊಂಡದಲ್ಲಿಯೇ ಆ ಗುಂಗುರು ಕೂದಲಿನ ಯುವಕ ಬಿದ್ದುಬಿಟ್ಟಿರಬಹುದು ಎಂದೂ ಅನಿಸುತ್ತದೆ. ಹಾಗೆ ಅನಿಸುವ ಹೊತ್ತಿಗೆ ಅವನಿಗೆ ಆ ಗುಂಗುರು ಕೂದಲಿನ ಯುವಕ ತನ್ನ ಬದುಕಿನ ಭಾಗವೇ ಆಗಿಬಿಟ್ಟಿರುವಂತಿದೆ. ಅವನಿಗಾಗಿ ನಡೆಸುವ ಹುಡುಕಾಟ ತನ್ನನ್ನು ತಾನೇ ಹುಡುಕಿಕೊಳ್ಳುವ ಯತ್ನವೂ ಎಂಬುದು ಹೊಳೆದಂತಿದೆ.